# ನಾಳೆಗೆ ಉಳಿಸುವ ನೆನಪಲ್ಲ



ಬಹುಮುಖಿ, ಬಹುರೂಪಿ ಚಿಂತನೆಯ ಭಾರತದಲ್ಲಿ ಸಾರ್ವಜನಿಕ ಪ್ರತಿಕ್ರಿಯೆಗಳು ಹಲವು ರೂಪಗಳನ್ನು ಪಡೆಯುವುದು ಹೊಸತಲ್ಲ; ಆದರೆ ಇತ್ತೀಚೆಗೆ ಅದು ಪಡೆದುಕೊಳ್ಳುತ್ತಿರುವ ಅಕರಾಳವಿಕರಾಳತೆ ನಿಜಕ್ಕೂ ಆತಂಕ ಹುಟ್ಟಿಸುವಂಥದು. ಕನ್ನಡದ ಪ್ರಮುಖ ಲೇಖಕ, ಚಿಂತಕ ಯು.ಆರ್. ಅನಂತಮೂರ್ತಿ ಅವರ ಸಾವಿನ ಸಂದರ್ಭದಲ್ಲಿ ಪಟಾಕಿ ಹೊಡೆದು, ಸಿಹಿ ಹಂಚಿ ಸಂಭ್ರಮಿಸಿದ ಕೆಲವರ ವಿಕೃತಿ, 'ನಾಗರಿಕ' ತಲೆಮಾರೊಂದು ನಾಳೆಗೆ ಬಿಟ್ಟುಹೋಗಬಹುದಾದ ನೆನಪಲ್ಲ.

ಯಾರ ಬಗ್ಗೆ ಮಾತನಾಡಿದ್ದಕ್ಕೆ ಇವರೆಲ್ಲ ಆಕ್ರೋಶಗೊಂಡಿದ್ದರೋ ಅವರೇ ಪ್ರಧಾನ ಮಂತ್ರಿ ಸ್ಥಾನದಿಂದ, ಅನಂತಮೂರ್ತಿ ಅವರ ನಿಧನದಿಂದ ತುಂಬಲಾರದ ನಷ್ಟವಾಗಿದೆ ಎಂಬ ಪ್ರತಿಕ್ರಿಯೆಯನ್ನು ಕೂಡಲೇ ಟ್ವೀಟ್ ಮಾಡಿದ್ದು ಇವರಿಗೆ ಏನನ್ನೂ ಹೇಳುವುದಿಲ್ಲವೇ !! ಭಿನ್ನಮತವನ್ನು ತಾತ್ವಿಕವಾಗಿ, ವೈಚಾರಿಕವಾಗಿ ಮತ್ತು ರಾಜಕೀಯವಾಗಿ ಎದುರಿಸಲಾರದ ಹೇಡಿತನ ತುಂಬಿಕೊಂಡವರ ಈ ರೀತಿಯ ಕೆಲಸವನ್ನು ಸಮಾಜ ಸಹಿಸಬಾರದು. ಏಕೆಂದರೆ ಅವು ಮಕ್ಕಳು ನೋಡಬಾರದ ಚಿತ್ರಗಳು.

ಅನಂತಮೂರ್ತಿ ಮತ್ತು ಅಂಥ ಅನೇಕ ಚಿಂತಕರ ಮಾತುಗಳಲ್ಲಿ ತುಂಬಿರುವ ತವಕ ತಲ್ಲಣ ತಳಮಳಗಳು ಸಮಾಜದ ಕಟುವಾಸ್ತವಗಳನ್ನೇ ಬಿಂಬಿಸುತ್ತಿವೆ. 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಹೆಗ್ಗಳಿಕೆ ಪಡೆದ ಕರ್ನಾಟಕದಲ್ಲಿ ಅಭಿಪ್ರಾಯಗಳೆಲ್ಲ ವಿವಾದಗಳಾಗಿ ಬದಲಾಗುವ ವಿಷಮ ಸ್ಥಿತಿ ಬರಬಾರದು. ಅಂಥದನ್ನು ತಡೆಗಟ್ಟುವ ವೈಚಾರಿಕತೆಯನ್ನು ಬೆಳೆಸುವುದು ಬರಹಗಾರರ ಕರ್ತವ್ಯವಲ್ಲವೇ?

'ಮಯೂರ' ದ ಈ ಸಂಚಿಕೆಯ ಹಲವು ಬರಹಗಳು ಅದನ್ನು ಕುರಿತೇ ಚರ್ಚಿಸುತ್ತಿವೆ. ಯುವಪೀಳಿಗೆ ವೈಚಾರಿಕ ಸಹನೆಯನ್ನು ಮತ್ತು ಸ್ವವಿಮರ್ಶೆಯನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಎತ್ತಿ ಹೇಳುತ್ತಿವೆ. ಹೇಳಬೇಕಾದ ಜರೂರು ಇದೆ ಎಂಬುದು ಪ್ರಜ್ಞಾವಂತ ಓದುಗರಿಗೆ ಗೊತ್ತು.

– ಆರ್. ಪೂರ್ಣಿಮಾ